

# ದೇಶವನ್ನು ಹಾಳುಮಾಡುವ ಪರದೆಯ ಹಿಂದಿನ ಕೇಡುಗಳು



## ನುಡಿಯಲ್ಪಟ್ಟ ಪ್ರವಾದನೆ

ದೇವರ ಸಮ್ಮುಖದಲ್ಲಿ ಕಾದಿದ್ದು ಆತನ ಮಾತುಗಳನ್ನು ಹೊಂದುವದಕ್ಕಾಗಿ ಪ್ರಾರ್ಥಿಸುತ್ತಿರುವಾಗ, ದೇವರು ಭಾರತ ದೇಶದ ಬಗ್ಗೆ ಮಾತನಾಡಿ: ರಕ್ತದ ಮೇಲಿನ ಹುಚ್ಚುಹಿಡಿದವರು, ಮಾನವ ಹತ್ಯೆಗಾರರು ನಿನ್ನ ದೇಶದಲ್ಲಿ ಹೆಚ್ಚಾಗಿ, ಅಧಿಕಾರವನ್ನು ಹೊಂದಿದ್ದಾರೆ. ಇವರು ತಾವು ಮಾಡಲು ನೆನಸಿದ ಪ್ರತಿಯೊಂದನ್ನು ಮಾಡಲಿಕ್ಕಾಗುವಂತ ಶಕ್ತಿಯನ್ನು ಅಧಿಕಾರವನ್ನು ಹೊಂದಿದ್ದಾರೆ. ಇವರು ಇಂತಹ ಅಧಿಕಾರವನ್ನು ಹೊಂದುವದಕ್ಕೂ ಮುಂಚೆ, ನಾನು ನಿಮ್ಮ ಬಳಿ ಇವುಗಳ ಬಗ್ಗೆ ಎಚ್ಚರಿಸಿ ಹೇಳಿದ್ದರು, ಅದನ್ನು ನೀವು ಲಕ್ಷ್ಯಕೈತರದೆ, ಪ್ರಾಮುಖ್ಯತೆ ಕೊಡದೆ ಬಿಟ್ಟುಬಿಟ್ಟಿರಿ. ಇದರ ನಿಮಿತ್ತದಿಂದಲೇ ಇಂದಿಗೆ ದೇಶದ ಮೇಲೆ ಹಂತಹಂತವಾಗಿ ಕೇಡುಗಳು ನಡೆಯುತ್ತಿರುವಂತದ್ದನು ನೋಡುತ್ತಿದ್ದೀರ. ಬಹಿರಂಗವಾಗಿ ನಡೆಯುತ್ತಿರುವದರ ಬಗ್ಗೆ ನೀವು ನೋಡುತ್ತಿರುವದು ಸ್ವಲ್ಪ ಮಾತ್ರವೇ, ಪರದೆಯ ಹಿಂದೆ ನಿನ್ನ ದೇಶಕ್ಕೆ ವಿರುದ್ಧವಾಗಿ ನಡೆಯುತ್ತಿರುವ ಕೃತ್ಯಗಳು ಬಹಳ. ಅವುಗಳನ್ನು ಹೇಳಿದರೆ ನಿಮಗೆ ತಾಳಲಾಗುವದಿಲ್ಲ, ಅದರ ಮರ್ಮ ಬಹು ದೊಡ್ಡದು ಮತ್ತೂ, ನಾನು ಹಾಗೆಯೇ ಕಾಯ್ದಿರುವ ವೇಳೆ ಕರ್ತನು ಮುಂದೆ ಮಾತನಾಡಿ: ನಿನ್ನ ದೇಶದಲ್ಲಿ ಉನ್ನತಿಗೆ ಬಂದಿರುವ ಪ್ರತಿಯೊಬ್ಬರೂ ಕೈಯಿಟ್ಟು ಮಾಡುವ ಕಾರ್ಯಗಳು ಮನುಷ್ಯರಿಗೆ ವಿರುದ್ಧವಾದಂತದ್ದು, ಮನುಷ್ಯನನ್ನು ಸಾಯಿಸುವಂತದ್ದೂ ಆಗಿದೆ. ದೀನನ ಬಳಿ ಕೊರೆದು ಅದನ್ನು ಬಲಿಷ್ಠನೊಂದಿಗೆ ಹಂಚಿಕೊಟ್ಟು, ದೀನನ ನೀತಿಯನ್ನು ಕುಂಠಿತಗೊಳಿಸಿ, ಅವನ ಜೀವನಾಧಾರ ವನ್ನು ಅಪಹರಿಸಿ ತಮಗೆಂದು ಆಸ್ತಿಯನ್ನು ಹೆಚ್ಚಿಸಿಕೊಳ್ಳುವದಕ್ಕಾಗಿ ಅದನ್ನು ದುಷ್ಟರ ಬಳಿ ಮಾರಿಬಿಡುತ್ತಾರೆ. ದೇಶದಲ್ಲಿ ದೀನನು, ದಲಿತನು ಕಾಣದೆ ಹೋಗುತ್ತಾರೆ ಅವರು ಭಾದೆಗೊಳಪಟ್ಟು ಕಣ್ಣೀರು ಸುರಿಸುವಾಗ ಅವರನ್ನು ಗಮನಿಸುವವರೂ ಇಲ್ಲ ಸಂತೈಸುವವರೂ ಇಲ್ಲ. ಹೊರ ತೋರಿಕೆಗೆ ಇವರುಗಳ ಬಗ್ಗೆ ಪರಿತವಕಿಸುವವರಂತೆ ಮರ್ಮವನ್ನು ಒಡ್ಡಿ, ಪರದೆಯ ಹಿಂದೆ ಇವರುಗಳ ಬಗ್ಗೆ ಪರಿಹಾಸ್ಯ ಮಾಡುತ್ತಾರೆ. ಇವರನ್ನು ಬಲಪಡಿಸುವಂತಹ ಹಿನ್ನಲೆ ಉತ್ತೇಜನವೆಂಬದು ಒಂದು ದೇಶದಿಂದ ಮಾತ್ರವಲ್ಲ,ಅನೇಕ ದೇಶಗಳಿಂದಲೂ ಬರುತ್ತದೆ ಇದಕ್ಕೆ ತಂತ್ರೋಪಾಯಗಳು ಅಲ್ಲಿಂದಲೇ ಬರುತ್ತದೆ. ಇದು ಲೋಕದಾದ್ಯಂತ ನಡೆಸುತ್ತಾ ಬರುತ್ತಿರುವ ಕೇಡಿನ ಕ್ರಿಯೆ. ಈ ದೇಶವು ನನ್ನ ನಾಮ ಮಹಿಮೆಗಾಗಿ ನಾನು ಮಾಡಲಿರುವ ಉಜ್ಜೀವನಕ್ಕಾಗಿ ಬೇಕು. ಆದ್ದರಿಂದ ಮುಂದೆಯೂ ಈ ಕೇಡುಗಳು ಈ ದೇಶದಲ್ಲಿ ಬೇರೂರಿ ನೆಲೆಗೊಳ್ಳದ ಹಾಗೆ ನನ್ನ ನಾಮವನ್ನು ಧರಿಸಿಕೊಂಡಿರುವ ನನ್ನ ಜನರು ನನ್ನ ಕಾರ್ಯವಾಗಿ ಎದ್ದು ಪ್ರಾರ್ಥನೆಯಿಂದಲೂ, ಉಪಹಾಸದಿಂದಲೂ ಯುದ್ಧ ಮಾಡುವ ಕಾಲ ಇದೇ ಆಗಿದೆ. ನಿಮ್ಮ ಖಡ್ಗವನ್ನು ನಾನು ನಿಮಗೆ ಕೊಟ್ಟ ಅಧಿಕಾರವನ್ನು ಉಪಯೋಗಿಸಿ ನಿನ್ನ ದೇಶವನ್ನು ಹಾಳುಮಾಡುವ ದುಷ್ಟ ಅಧಿಕಾರಗಳನ್ನು ಆಳ್ವಿಕೆಗಳನ್ನು ಅಡಗಿಸಿ ಹಾಕಿರಿ. ನಾನು ನನ್ನ ಚಿತ್ತದ ಬಗ್ಗೆ ಭಾರದಿಂದ ತವಕಪಡುವವನಿಗೆ ಬಲವನ್ನು, ಪ್ರಾರ್ಥಿಸುವವನಿಗೆ ಸತ್ವವನ್ನು ಹೆಚ್ಚಿಸಿ ಅಂತವರನ್ನು ಜಯಿಸುವಂತೆ ಮಾಡುವ ಕರ್ತನು ಅಂದನು. ( ನುಡಿಯಲ್ಪಟ್ಟ ದಿನ 18.12.2017 ಮತ್ತು 06.01.2018)

## ಪ್ರಾರ್ಥನಾ ಮನವಿ

01. ಭಾರತ ದೇಶಕ್ಕಾಗಿಯೂ ಅದರ ಆಡಳಿತ ಮತ್ತು ಆಳ್ವಿಕೆಗಳಿಗಾಗಿ ಪ್ರಾರ್ಥಿಸಿರಿ. ಕೇಡುಗಳು ಬರಲು ದೇಶಕ್ಕೆ ವಿರುದ್ಧವಾಗಿ ಮಾಡುವಂತಹ ಯಾವ ಒಂದು ಶಕ್ತಿಗಳು ಕಟ್ಟಿಹಾಲ್ಪಡುವಂತೆಯೂ ದೇಶವಿರೋಧಿ ಕೇಡುಗಳು ಕಟಿಹಾಕಲ್ಪಡುವಂತೆಯೂ ಪ್ರಾರ್ಥಿಸಿರಿ.

02. ದೇಶದ ಸಂಪತ್ತನ್ನು ಅದರ ಮೂಲಗಳನ್ನು ಕೊರೆದು ತಮ್ಮನ್ನು ಮೇಲೆ ಮೇಲೆ ಹೆಚ್ಚಿಸಿಕೊಳ್ಳಲು ಯತ್ನಿಸುವ ದುಷ್ಟಜನರನ್ನು, ಅವರಿಗೆ ಕೈಜೋಡಿಸುವ ರಾಜಕೀಯ ವ್ಯಕ್ತಿಗಳು ಮತ್ತು ಆಡಾಳಿತಾಧಿಕಾರಿಗಳು ಯಾರಬ್ಬರನ್ನು ದೇವರು ತಡೆದು, ಅವರು ಮಾಡಲು ನೆನೆಸಿರುವ ಯಾವ ಒಂದು ದುಷ್ಟಕಾರ್ಯಗಳು, ಉದ್ದೇಶಗಳು ಅಳಿಸಿಹೋಗುವಂತೆ ಪ್ರಾರ್ಥಿಸಿರಿ.

03. ತಮ್ಮ ಜೀವನಾಧರಗಳು ಭಾಧಿಸಲ್ಪಡುತ್ತದೆ ಎಂಬ ಪ್ರಜ್ಞೆಯಿಲ್ಲದೆ ಇಂತಹ ವ್ಯಕ್ತಿಗಳನ್ನು ನಂಬುವಂತಹ ದೇಶದ ಧೀನರ ಮನಸ್ಸನ್ನು ಕತ್ತಲೆಗೊಳಿಸಿ ಇಟ್ಟಿರುವಂತ ದುಷ್ಟಶಕ್ತಿಗಳು ಕಟ್ಟಲ್ಪಡುವಂತೆಯೂ, ದೇಶದ ಜನರೊಳಗೆ ಇದರ ಪ್ರಜ್ಞೆ ಉಂಟಾಗುವಂತೆಯೂ ಪ್ರಾರ್ಥಿಸಿರಿ.

04. ದೇಶದಲ್ಲಿ ನಡೆಯುತ್ತಿರುವಂತ ಇಂತಹ ಘೋರಸಂಭವಗಳನ್ನು ಕಂಡು ಅದರ ಬಗ್ಗೆ ಚಿಂತೆ ಪಡದೆ, ತಮ್ಮ ಕಾರ್ಯಗಳ ಬಗ್ಗೆ ಮಾತ್ರ ಸ್ವಾರ್ಥದಿಂದ ಚಿಂತಿಸುವ ಸಭೆಗಳು, ಸೇವಕರುಗಳು, ವಿಶ್ವಾಸಿಗಳು ಮಾನಸಾಂತರ ಹೊಂದಿ ತಮ್ಮ ದೇಶಕ್ಕಾಗಿ ಒಡಕಿನಲ್ಲಿ ನಿಂತು ಜವಾಬ್ದಾರಿವಹಿಸಿ ಪ್ರಾರ್ಥಿಸಲು ಎದ್ದೇಳಲಿಕ್ಕಾಗುವಂತೆ ಪ್ರಾರ್ಥಿಸಿರಿ.

05. ದೇಶವನ್ನು ಬಲಹೀನಗೊಳಿಸುವ ಈ ದುಷ್ಟರಿಗೆ ಕೈಜೋಡಿಸುವ ವಿಶ್ವದಾದ್ಯಂತ ಅನೇಕ ದೇಶಗಳನ್ನು ನಿಯಂತ್ರಿಸುತ್ತಾ ಬರುತ್ತಿರುವ ಎಲ್ಲಾ ದುಷ್ಟಸಂಘಟನೆಗಳನ್ನೂ, ಅವರ ಅಧಿಕಾರಗಳನ್ನೂ ದೇವರು ಮಾರ್ಪಡಿಸುವಂತೆಯೂ ಅವರು ಕೆಡುಕಿನ ಹಿನ್ನಲೆಯಲ್ಲಿ ಕೈಜೋಡಿಸಿರುವದರಿಂದ ಅವರ ಖಡ್ಗಗಳು ಒಂದಕ್ಕೊಂದು ವಿರುದ್ಧವಾಗಿ ತಿರುಗುವಂತೆಯೂ ಪ್ರಾರ್ಥಿಸಿರಿ.